# ಎದೆಯ ನಂದನದಲ್ಲಿ ಮತ್ತೆ ಹಾಡಿತು ಕೋಗಿಲೆ...

ಭಾರತಕ್ಕೆ ಮರಳುವ ವಿಮಾನದಲ್ಲಿ ಪೂರ್ವಿಕಾಳೊಂದಿಗೆ ಕುಳಿತಿದ್ದ ಆಸ್ಕರ್ ವೈಲ್ಡ್ ಮನಸ್ಸಿನೊಳಗೆ ಅವನು ಅಧ್ಯಯನ ಮಾಡಿದ ಸಾಹಿತಿಗಳು, ಅವರ ಸಾಹಿತ್ಯ ರಚನೆ ಬಿಚ್ಚಿಕೊಂಡಿತ್ತು. ಮೊದಲಿಗೆ ನೆನಪಾದದ್ದೇ ಆಸ್ಕರ್ ವೈಲ್ಡನ ಅನನ್ಯ ದುರಂತ ಪ್ರೇಮಕಥೆ 'ದಿ ನೈಟಿಂಗೇಲ್ ಅಂಡ್ ದಿ ರೆಡ್ ರೋಸ್'. ಆ ಕೃತಿ ಅವನ ಮನಸ್ಸನ್ನು ಅಗಾಧವಾಗಿ ತಟ್ಟಿದ್ದರಿಂದಲೇ ಅವನು ಸೋನಾ ಲಾಲ್ ಎಂಬ ತನ್ನ ಹೆಸರನ್ನು ಆಸ್ಕರ್ ವೈಲ್ಡ್ ಎಂದು ಬದಲಾಯಿಸಿಕೊಂಡಿದ್ದು. ವಿದ್ಯಾರ್ಥಿಯೊಬ್ಬನ ಪ್ರೇಮದ ಕನಸನ್ನು ಪೂರೈಸುವುದಕ್ಕಾಗಿ ನೈಟಿಂಗೇಲ್ ಪಕ್ಷಿ ಪ್ರಾಣ ತ್ಯಾಗ ಮಾಡುವ ಕಥಾನಕವುಳ್ಳ ಆ ಕಥೆ ಮತ್ತು ಅದನ್ನು ಆಧರಿಸಿ ಬಿದ್ದ ಕನಸು ಆಸ್ಕರ್ ವೈಲ್ಡನ ಮನದಲ್ಲಿ ಇನ್ನೂ ಹಚ್ಚಹಸಿರಾಗಿದೆ. ಇನ್ನು ಅದ್ಭುತ ಕವಿ, ನಾಟಕಕಾರ ಶೇಕ್ಸ್‌ಪಿಯರ್ ಮನದಲ್ಲಿ ಮೂಡಿದ್ದ.

ಶೇಕ್ಸ್‌ಪಿಯರ್‌ನ ಎಷ್ಟೊಂದು ಪ್ರೇಮದ ಸಾನೆಟ್‌ಗಳು ಡಿಗ್ರಿ ಅಧ್ಯಯನ ಮಾಡುವಾಗ ಅವನ ನಾಲಿಗೆಯ ಮೇಲೆ ನಲಿಯುತ್ತಿದ್ದವು. ಸಾನೆಟ್ ಒಂದರಲ್ಲಿ ಪ್ರೇಮವನ್ನು ಕುರಿತು 'ನಿನಗೆ ಎಂದಿಗೂ ವಯಸ್ಸಾಗುವುದಿಲ್ಲ, ನೀನು ಎಂದಿಗೂ ಒಂದೇ ಒಂದು ಚೂರು ಮಾಸುವುದಿಲ್ಲ ಮತ್ತು ನಿನಗೆ ಖಂಡಿತಾ ಸಾವೆಂಬುದು ಇಲ್ಲ' ಎಂಬ ಸಾಲುಗಳು ಅವನ ನೆನಪಿನ ಭಿತ್ತಿಯಲ್ಲಿ ಭದ್ರವಾಗಿವೆ. ಶೇಕ್ಸ್‌ಪಿಯರ್‌ನ ದುರಂತ ಪ್ರೇಮ ಕಾವ್ಯ/ನಾಟಕ ರೋಮಿಯೊ ಜ್ಯೂಲಿಯೆಟ್ ಪಾಠವನ್ನು ಮೊದಲ ಸ್ನಾತಕೋತ್ತರ ತರಗತಿಯಲ್ಲಿ ಸ್ಯಾಮುಯಲ್ ಕಾಮತ್ ಸರ್ ಮಾಡುತ್ತಿರುವಾಗ ಆಸ್ಕರ್ ವೈಲ್ಡ್ ಸೇರಿ ಮೂರ್ನಾಲ್ಕು ವಿದ್ಯಾರ್ಥಿಗಳು ಬಿಕ್ಕಿ ಬಿಕ್ಕಿ ಅತ್ತಿದ್ದರು. **'good night, good night/ parting is such sweet sorrow, that I shall say good night till it be morrow'** ಎಂಬ ರೋಮಿಯೊ ಜ್ಯೂಲಿಯೆಟ್ ನಾಟಕದ ಸಾಲು ಆಸ್ಕರ್ ವೈಲ್ಡನಲ್ಲಿ ಆಗಾಗ ಮಧುರವಾದ ಅನುಭೂತಿಯನ್ನು ಮೂಡಿಸುತ್ತಿದ್ದವು. ಮೂರು ತಿಂಗಳ ಹಿಂದೆ ಸ್ಯಾಮುಯಲ್ ಕಾಮತ್ ಸರ್ ತರಗತಿಯಲ್ಲಿ ರೋಮಿಯೊ ಜೂಲಿಯಟ್ ಪಾಠ ಮಾಡುತ್ತಿರುವಾಗಲೇ ಹಠಾತ್ತಾಗಿ ಎದೆನೋವು ಕಾಣಿಸಿಕೊಂಡು ಕುಸಿದು ಬಿದ್ದು, ಹೃದಯಾಘಾತದಿಂದ ಸಾವನ್ನಪ್ಪಿದ ಸುದ್ದಿ ತಿಳಿದು ಆಸ್ಕರ್ ವೈಲ್ಡ್ ವಿಪರೀತವಾಗಿ ಗಾಸಿಗೊಂಡಿದ್ದ.

ಅಧ್ಯಯನ ಕಾಲದಲ್ಲಿ ಆಸ್ಕರ್ ವೈಲ್ಡನನ್ನು ಬಲವಾಗಿ ಸೆಳೆದ ಇನ್ನೊಬ್ಬ ಸಾಹಿತಿಯೆಂದರೆ **'poet of beauty'** ಎಂದೇ ಕರೆಯಲ್ಪಡುತ್ತಿದ್ದ ಜಾನ್ ಕೀಟ್ಸ್. ಭಾವುಕತೆ, ನೀತಿ ಮತ್ತು ಪ್ರಕೃತಿಯ ಮೇಲೆ ಅಪರೂಪದ ಪ್ರೀತಿಯನ್ನು ಇಟ್ಟುಕೊಂಡು ಬರೆಯುತ್ತಿದ್ದ ಕೀಟ್ಸ್ ಸಾಹಿತ್ಯದ ಬಗ್ಗೆ ಒಂದನೇ ವರ್ಷದ ಸ್ನಾತಕೋತ್ತರ ಪದವಿಯಲ್ಲಿದ್ದಾಗ ಒಂದು ಅದ್ಭುತವಾದ ಪ್ರಬಂಧವನ್ನು ಬರೆದು ವಿಶ್ವವಿದ್ಯಾಲಯ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ ಗಳಿಸಿ ಸೈ ಅನ್ನಿಸಿಕೊಂಡಿದ್ದ. ಲಾರ್ಡ್ ಬೈರನ್, ಶೆಲ್ಲಿ, ಎಮಿಲಿ ಡಿಕನ್ಸನ್, ಜಾನ್ ದೊನ್ನೆ, ವಿಲಿಯಮ್ ವರ್ಡ್ಸ್‌ವರ್ತ್, ವಿಲಿಯಂ ಬ್ಲೇಕ್... ಎಷ್ಟೊಂದು ಮಂದಿ ಸಾಹಿತಿಗಳು ಆಸ್ಕರ್ ವೈಲ್ಡನ ನೆನಪಿನ ಪರದೆಯ ಮೇಲೆ ತೆರೆದುಕೊಂಡದ್ದು! ಹೌದು, ಪಿಯುಸಿಯಲ್ಲಿ ಬಿದ್ದ ಆ ಕನಸು ಆಸ್ಕರ್ ವೈಲ್ಡನನ್ನು ಸಾಹಿತ್ಯದ ಕಡೆ ಕೊಂಡೊಯ್ದಿತ್ತಲ್ಲದೆ ಅವನ ಮನಸ್ಸನ್ನು ಮೃದು ಮಾಡಿ ಸ್ವಭಾವ–ನಡತೆಗಳಲ್ಲಿ ಮಹತ್ತರವಾದ ಬದಲಾವಣೆಗಳನ್ನು ತಂದಿತ್ತು. ಸಾಹಿತ್ಯ ಅವನಲ್ಲಿ ಬಂಡವಾಳಶಾಹಿ ಮನೋಭಾವ ಬೆಳೆಯದಂತೆ ನೋಡಿಕೊಂಡಿತ್ತು. ಮಾನವೀಯತೆ, ಕರುಣೆಗಳು ಅವನಲ್ಲಿ ಮನೆಮಾಡುವಂತೆ ಮಾಡಿದ್ದೇ ಸಾಹಿತ್ಯದ ಓದು. ಆಸ್ಕರ್ ವೈಲ್ಡ್ ಈ ಮೂರು ವರ್ಷಗಳ ಹಿಂದೆ ತಮ್ಮ ಕಂಪನಿಯಲ್ಲಿ ಕೆಲಸ ಮಾಡುವವರ ಮಕ್ಕಳಿಗೇ ಅಲ್ಲದೆ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗಾಗಿ ತಾತ ಗುನ್ನಾಲಾಲನಿಗೆ ಹೇಳಿ 'ಆಸ್ಕರ್ ಸ್ಟೂಡೆಂಟ್ ಫಂಡ್' ಸ್ಥಾಪಿಸಿದ್ದ. ಕಂಪನಿಯ ಒಂದಿಷ್ಟು ಲಾಭಾಂಶವನ್ನು ಫಂಡ್‌ಗೆ ತುಂಬಲಾಗುತ್ತಿತ್ತು. ಅದರಿಂದ ಸಾವಿರಾರು ಮಂದಿ ವಿದ್ಯಾರ್ಥಿಗಳಿಗೆ ಅನುಕೂಲವಾಗಿತ್ತು. ಆದ್ದರಿಂದಾಗಿಯೇ ಅವನು ಸಾಹಿತ್ಯಕ್ಕೆ ಸದಾ ಧನ್ಯನಾಗಿರುತ್ತಿದ್ದ. ಆದರೆ ಅಂಜಲಿ ದೇಸಾಯಿ, ಸಾಯಿಪ್ರಭೆ, ಪೂರ್ವಿಕಾ ಮತ್ತು ಮೈಥಿಲಿ ಪ್ರತಿಯೊಬ್ಬರೂ ತನ್ನನ್ನು ಏಕೆ ಸಾಹಿತ್ಯದ ಪರಿಭಾಷೆಯಲ್ಲಿ



